PW – 1

ದಿನಾಂಕಃ 25.02.2026 ರಂದು ಸಾಕ್ಷಿಗೆ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದ –

2022 ರ 7 ನೇ ತಿಂಗಳಿನಲ್ಲಿ ಅಪಘಾತವಾಗಿದ್ದು ದಿನಾಂಕ ನೆನಪಿಲ್ಲ. ಅಪಘಾತವಾದ ಕೂಡಲೇ ಸಿ ಜಿ ಆಸ್ಪತ್ರೆಗೆ ಹೋಗಿದ್ದೆ. ನಂತರ ಮಂಗಳೂರಿನ ಯಾನೆಪೋಯ ಆಸ್ಪತ್ರೆಗೆ ಹೋಗಿದ್ದೆ. ಈ ಎರಡೂ ಆಸ್ಪತ್ರೆಯಲ್ಲಿ ಅಪಘಾತದ ಬಗ್ಗೆ ಬರೆದಿರುವುದು ಸತ್ಯವಾಗಿದೆ. ಈ ರೀತಿ ಬರೆಯಲು ನಾನು ನನ್ನ ಮನೆಯವರು ಮಾಹಿತಿ ನೀಡಿದ್ದೇವೆ ಎಂದರೆ ಸರಿ. ನನ್ನ ಹೆಂಡತಿ ಗಂಗಮ್ಮ ಪೊಲೀಸರಿಗೆ ದೂರು ನೀಡಿದ್ದಾರೆ. ನನ್ನ ಹೇಳಿಕೆಯಂತೆ ಆಕೆ ದೂರು ನೀಡಿದ್ದಾರೆ ಎಂದರೆ ಸರಿ. ಸದರಿ ದೂರು ಸತ್ಯವಾಗಿದೆ ಎಂದರೆ ಸರಿ. ಅಪಘಾತವಾದ ಸಮಯದಲ್ಲಿ ಆಕೆ ಮನೆಯಲ್ಲಿ ಇದ್ದರು. ಅಪಘಾತದ ಸ್ಥಳದಿಂದ ಸಿ ಜಿ ಆಸ್ಪತ್ರೆ ಮತ್ತು ಯಾನೆಪೋಯ ಆಸ್ಪತ್ರೆಗೆ ಹೋಗುವಾಗಲೂ ಆಕೆ ನನ್ನ ಜೊತೆಯಲ್ಲೇ ಇದ್ದರು ಎಂದರೆ ಸರಿ. ನಾನು ಆಕೆಗೆ ಹೇಳಿದಂತೆ ಆಕೆ ಹೋಗಿ ದೂರು ನೀಡಿದ್ದಾರೆ ಎಂದರೆ ಸರಿ. ದೂರಿನಲ್ಲಿ ನಮೂದು ಮಾಡಿದ ಅಪಘಾತಪಡಿಸಿದ ವಾಹನದ ಹೆಸರು ಸತ್ಯವಾಗಿದೆ. ಪೊಲೀಸು ದಾಖಲೆಗಳನ್ನು ವಕೀಲರ ಬಳಿ ಓದಿ ತಿಳಿದುಕೊಂಡಿದ್ದೇನೆ. ಪೊಲೀಸರು ವಾಹನ ಚಾಲಕನಿಗೆ ಡಿ ಎಲ್ ಮತ್ತು ಇಂಜಿನ್ ವಿಮೆ ಇಲ್ಲ ಎಂದು ಹೇಳಿದ್ದರು ಎಂದರೆ ಸರಿ. ನನಗೆ ಅಪಘಾತಪಡಿಸಿದ ಟ್ರಾಕ್ಟರ್ ಸಂ. ಕೆಎ 51 ಟಿ 3675 ಎಂದರೆ ಸರಿ. ಆ ವಾಹನದವರು ನನಗೆ ಪರಿಹಾರ ನೀಡಬೇಕು ಎಂದರೆ ಸರಿ. ಟ್ರೆಲರ್ ನಂ. ಕಎ 17 ಟಿಬಿ 3357 ವಾಹನದ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ಪರಿಹಾರ ಪಡೆಯುವ ಸಲುವಾಗಿ ಟ್ರೆಲರ್ ನಂ. ಕಎ 17 ಟಿಬಿ 3357 ವಾಹನವನ್ನು ಸೇರಿಸಿದ್ದೇವೆ ಎಂದರೆ ಸರಿ. ಟ್ರೆಲರ್ ನಂ. ಕಎ 17 ಟಿಬಿ 3357 ವಾಹನದಿಂದ ಯಾವುದೇ ಅಪಘಾತವಾಗದೇ ಇದ್ದ ಕಾರಣ 4 ನೇ ಎದುರುದಾರ ವಿಮ ಕಂಪನಿ ಪರಿಹಾರ ನೀಡಲು ಬರುವುದಿಲ್ಲ ಎಂದರೆ ಸರಿ. ನನಗೆ ಗಾಯವಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಬಳಿ ಮೋಟರ್ ಸೈಕಲ್ ಚಲಾಯಿಸಲು ಡಿ ಎಲ್ ಇರಲಿಲ್ಲ ಹಾಗೂ ವಿಮೆ ಕೂಡಾ ಇರಲಿಲ್ಲ ಎಂದರೆ ಸರಿ. ನಾನು ಬೈಕಿನಲ್ಲಿ ಹೋಗುವಾಗ ಟ್ರಾಕ್ಟರ್ ಸಂ. ಕೆಎ 51 ಟಿ 3675 ಮತ್ತು ಟ್ರೆಲರ್ ನಂ. ಕಎ 17 ಟಿಬಿ 3357 ರ ಚಾಲಕ 1 ನೇ ಎದುದಾರ ನನಗೆ ಡಿಕ್ಕಿಪಡಿಸಿದ್ದ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವ್ಯವಸಾಯದಿಂದ ತಿಂಗಳಿಗೆ 25 ಸಾವಿರ ದುಡಿಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಮಗೆ ಅನುಕೂಲವಾಗಲಿ ಎಂದು ವೈದ್ಯಕೀಯ ದಾಖ್ಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

ಅಂಬುಲೆನ್ಸ ನಲ್ಲಿ ವೆಂಟಿಲೇಟರ್ ಮಾಸ್ಕ್ ನನಗೆ ಹಾಕಿರಲಿಲ್ಲ. ಅಕ್ಸಿಜನ್ ನೀಡಿರಲಿಲ್ಲ. ನಿಪಿ–4 ರ 87 ನೇ ಬಿಲ್ಲಿನ ತಾಃ 2.9.2022 ರ ಬಿಲ್ಲನ್ನು ತಿದ್ದುಪಡಿ ಮಾಡಲಾಗಿದೆ ಎಂದರೆ ಸಾಕ್ಷಿ ಅದನ್ನು ನೋಡಿ ಸರಿ ಎಂದು ಒಪ್ಪಿಕೊಂಡಿರುತ್ತಾರೆ. 85 ನೇ ಸೀರಿಯಲ್ ನಂಬರ್ ನ ದಾಖ್ಲೆಯ ಬಿಲ್ಲುಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ
ನ್ಯಾಯಾಲಯ, ದಾವಣಗೆರೆ